ಬೆಂಗಳೂರು ನಗರ ವಿಶ್ವವಿದ್ಯಾನಿಲಯ
BENGALURU CITY UNIVERSITY
Central College Campus, Dr. Ambedkar Veedhi, Bengaluru – 560 001.
Ph. No: 080 – 22131385/ E-Mail ID: registrarbcu@gmail.com

ಸಂಖ್ಯೆ:ಬೆ.ನ.ವಿ/ಶೈಕ್ಷಣಿಕ/ಸುತ್ತೋಲೆ/3/2021–22 ದಿನಾಂಕ:27.01.2022

# ಸುತ್ತೋಲೆ

**ವಿಷಯ:** 2021–22ರ ಸ್ನಾತಕ ಪ್ರಥಮ ವರ್ಷದ ಕೋರ್ಸಗಳ ಪ್ರವೇಶ ಪ್ರಕ್ರಿಯೆಯ ಆನ್‌ಲೈನ್‌ಲ್ಲಿ ಭಾಷೆಯನ್ನು ಬದಲಾವಣೆಗೊಳಿಸುವ ಬಗ್ಗೆ:-

**ಉಲ್ಲೇಖ:**
1. ರಿಟ್ ಅರ್ಜಿ ನಂ.18156/2021(PIL) ರಲ್ಲಿ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದ ಮಧ್ಯಾಂತರ ಆದೇಶ ದಿನಾಂಕ:16.12.2021
2. ಸರ್ಕಾರ ಪತ್ರ ಸಂಖ್ಯೆ: ಇಡಿ 17 ಯುಎನ್ಇ 2021 ದಿನಾಂಕ:21.01.2022
3. ಸುತ್ತೋಲೆ ಸಂಖ್ಯೆ:ಸಂ.ಸಿಸಿಯು/ಎಸ್‌ವೈಎನ್/ಎನ್‌ಇಪಿ/330/2021–22 ದಿನಾಂಕ:24.01.2022
4. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ:27.01.2022

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ ಬೆಂಗಳೂರು ನಗರ ವಿಶ್ವವಿದ್ಯಾಲಯದ ವ್ಯಾಪ್ತಿಗೆ ಬರುವ ಸಂಯೋಜಿತ ಕಾಲೇಜುಗಳು 2021–22ನೇ ಶೈಕ್ಷಣಿಕ ವರ್ಷದ ಪ್ರಥಮ ಸ್ನಾತಕ ಪದವಿ ಕೋರ್ಸಗಳ ಪ್ರವೇಶ ಅನುಮೋದನೆಯ ಪ್ರಕ್ರಿಯೆಗಾಗಿ ಆನ್‌ಲೈನ್ ಮುಖಾಂತರ ಅಪಲೋಡ್ ಮಾಡಲು ದಿನಾಂಕ:10.01.2022 ರವರೆಗೆ ವಿಸ್ತರಿಸಲಾಗಿತ್ತು.

ಆದರೆ ಉಲ್ಲೇಖ 1 ಮತ್ತು 2 ರ ಮಧ್ಯಾಂತರ ಸರ್ಕಾರಿ ಆದೇಶ ಹಿನ್ನಲೆಯಲ್ಲಿ ಉಲ್ಲೇಖ 3ರ ವಿಶ್ವವಿದ್ಯಾನಿಲಯದ ಸುತ್ತೋಲೆಯ ಅನ್ವಯ, ವಿದ್ಯಾರ್ಥಿಗಳ ವ್ಯಾಸಂಗದ ಕನ್ನಡ ಭಾಷೆಯನ್ನು ಒಂದು ಭಾಷೆಯನ್ನಾಗಿ ಕಲಿಯಲು ಇಚ್ಛಿಸದಿದ್ದಲ್ಲಿ ಅಂತಹ ವಿದ್ಯಾರ್ಥಿಗಳು ಮಾನ್ಯ ನ್ಯಾಯಾಲಯದ ಅಂತಿಮ ಆದೇಶವಾಗುವವರೆಗೂ ಕನ್ನಡ ಭಾಷೆಯನ್ನು ಕಡ್ಡಾಯವಾಗಿ ಕಲಿಯುವ ಅಗತ್ಯವಿಲ್ಲವೆಂದು ತಿಳಿಸಿರುವುದರಿಂದ ಹಾಗೂ ಈಗಾಗಲೇ ಕನ್ನಡ ಭಾಷೆಯನ್ನು ಆನ್‌ಲೈನ್ ಪೋಟಲ್‌ನಲ್ಲಿ ನಮೂದಿಸಿರುವ ವಿದ್ಯಾರ್ಥಿಗಳಿಗೆ ಅನುಕುಲವಾಗುವಂತೆ **ದಿನಾಂಕ:29.01.2022** ರವರೆಗೆ ಆನ್‌ಲೈನ್ ಪೋಟಲ್‌ನಲ್ಲಿ ಬದಲಾವಣೆ ಮಾಡಿಕೊಳ್ಳಬಹುದಾಗಿದೆ.

ಪ್ರಥಮ ಸ್ನಾತಕ ಪದವಿಯ ವಿದ್ಯಾರ್ಥಿಗಳ ಅನುಮೋದನೆಯ ಪ್ರಕ್ರಿಯೆಯನ್ನು ಫೆಬ್ರವರಿ 2022ರ ಮೊದಲನೇ ವಾರದಲ್ಲಿ ಪ್ರಾರಂಭಿಸಬೇಕಾಗಿರುವುದರಿಂದ ಮೇಲೆ ತಿಳಿಸಿದ ದಿನಾಂಕದೊಳಗೆ ಅಪ್‌ಲೋಡ್ ಮಾಡಲು ಕಾಲೇಜುಗಳ ಪ್ರಾಂಶುಪಾಲರುಗಳಿಗೆ ಸೂಚಿಸಲಾಗಿದೆ.

ಕುಲಸಚಿವರು

ಗೆ,

1) ಪ್ರಾಂಶುಪಾಲರು, ಸಂಯೋಜಿತ ಕಾಲೇಜುಗಳು, ಬೆಂ.ನ.ವಿ.ವಿ. ಬೆಂಗಳೂರು.

ಪ್ರತಿಗಳು:

1) ಕುಲಪತಿಗಳು/ಕುಲಸಚಿವರು/ ಕುಲಸಚಿವರು(ಮೌ)/ವಿತ್ತಾಧಿಕಾರಿಗಳು ಆಪ್ತ ಕಾರ್ಯದರ್ಶಿಗಳು, ಬೆಂ.ನ.ವಿ.ವಿ. ಬೆಂಗಳೂರು.
2) ಕಛೇರಿ ಪ್ರತಿ/ರಕ್ಷಾ ಕಡತ.